ಸುವರ್ಣ ಸಂಭ್ರಮ

# ನಿಮ್ಮೊಡನೆ

ಇದು ಒಂದು ಶಾಲೆಯ ಕಥೆ ಮಾತ್ರವಲ್ಲ. ಸರಿಯಾಗಿ ತನಿಖೆ ಮಾಡಿದರೆ ಬೆಂಗಳೂರಿನಲ್ಲಿ ಮತ್ತು ರಾಜ್ಯದ ಇತರ ನಗರಗಳಲ್ಲಿ ಇಂತಹ ನೂರಾರು ಖಾಸಗಿ ಶಾಲೆಗಳು ಪತ್ತೆಯಾಗುವುದು ಖಂಡಿತ! ಹಾಗೆಯೇ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಇದು ಗೊತ್ತಿಲ್ಲದೇ ನಡೆಯುವಂಥದ್ದೂ ಅಲ್ಲ.

## ಶಿಕ್ಷಣದ ವ್ಯಾಪಾರ ಮತ್ತು ವಂಚನೆ

ಒಂದು ಕಾಲವಿತ್ತು– ಶಾಲೆಗಳಲ್ಲಿ ಪಠ್ಯಪುಸ್ತಕಗಳಿಗಿಂತ ಹೆಚ್ಚಾಗಿ ನೈತಿಕ ಶಿಕ್ಷಣಕ್ಕೆ ಒತ್ತು ನೀಡಲಾಗುತ್ತಿತ್ತು. ಪರೀಕ್ಷೆಯಲ್ಲಿ ಫೇಲಾದರೂ ವ್ಯಕ್ತಿತ್ವ ವಿಕಸನದಲ್ಲಿ ವಿದ್ಯಾರ್ಥಿಗಳು ಪಾಸಾಗುತ್ತಿದ್ದರು. ಈಗ ಕಾಲ ಬದಲಾಗಿದೆ. ನೀತಿಪಾಠಗಳನ್ನು ಹೇಳಿಕೊಡಬೇಕಾದ ಶಾಲೆಯಲ್ಲೇ ಅನೈತಿಕ ವಾತಾವರಣ ಸೃಷ್ಟಿಯಾಗುತ್ತಿದೆ. 'ಮಕ್ಕಳೇ, ಗಾಂಧೀಜಿಯಿಂದ ನಾವು ಕಲಿಯುವ ಪಾಠವೆಂದರೆ, ಯಾವತ್ತೂ ಸುಳ್ಳು ಹೇಳಬಾರದು' ಎಂದು ಹೇಳಿಕೊಡುವ ಶಾಲೆಗಳೇ ಸರ್ಕಾರಕ್ಕೆ, ಪೋಷಕರಿಗೆ ಸುಳ್ಳು ಹೇಳಿ ಅನುಮತಿಯೇ ಇಲ್ಲದ ತರಗತಿಗಳನ್ನು ಕಾನೂನುಬಾಹಿರವಾಗಿ ನಡೆಸುತ್ತಿವೆ. ಅದಕ್ಕೆ ಸಾವಿರಾರು ರೂಪಾಯಿಗಳ ಶುಲ್ಕ ಸಂಗ್ರಹಿಸಿ, ಪ್ರತಿಷ್ಠಿತ ಆಂಗ್ಲ ಮಾಧ್ಯಮ ಶಾಲೆಗಳಾಗಿ ಮೆರೆಯುತ್ತಿವೆ! ಆಂಗ್ಲ ಮಾಧ್ಯಮ ಶಿಕ್ಷಣದ ವ್ಯಾಮೋಹ ಪೋಷಕರನ್ನು ಮತ್ತು ಅವರ ಮಕ್ಕಳನ್ನೂ ಹೊಸ ದುರಂತದ ಹೆಬ್ಬಾಗಿಲಿಗೆ ತಂದು ನಿಲ್ಲಿಸುತ್ತಿದೆ.

ಬೆಂಗಳೂರಿನ ಜಾಲಹಳ್ಳಿಯ ಪ್ರತಿಷ್ಠಿತ ಆಂಗ್ಲಶಾಲೆಯ ಇತ್ತೀಚಿನ ಪ್ರಕರಣವನ್ನೇ ಗಮನಿಸಿ. ನರ್ಸರಿ ತರಗತಿಯಲ್ಲಿ ಕಲಿಯುತ್ತಿರುವ ಇನ್ನೂ ಮೂರು ವರ್ಷದ ಎಳೆಯ ಕಂದಮ್ಮನ ಲೈಂಗಿಕ ದೌರ್ಜನ್ಯದ ದೂರು ಬಂದ ಬಳಿಕ ಅಧಿಕಾರಿಗಳು ಹೋಗಿ ತನಿಖೆ ನಡೆಸಿದರೆ, ಆ ಶಾಲೆ ಸರ್ಕಾರದ ಅನುಮತಿಯೇ ಇಲ್ಲದೆ ನಡೆಯುತ್ತಿದೆ ಎನ್ನುವುದು ಗೊತ್ತಾಯಿತು! ಶಾಲೆ ಸರ್ಕಾರದಿಂದ ಅನುಮತಿ ಪಡೆದದ್ದು ಒಂದರಿಂದ ಐದನೇ ತರಗತಿವರೆಗೆ ಕನ್ನಡ ಮಾಧ್ಯಮದಲ್ಲಿ ತರಗತಿ ನಡೆಸಲು. ಆದರೆ ಅಲ್ಲಿ ಪ್ರಿ ನರ್ಸರಿಯಿಂದ 7ನೇ ತರಗತಿಯವರೆಗೆ ಇದ್ದು, ಅನುಮತಿಯೇ ಇಲ್ಲದ ಸಿಬಿಎಸ್‌ಸಿ ಸಿಲೆಬಸ್ ಪ್ರಕಾರ ನಡೆಯುತ್ತಿದೆ! ನರ್ಸರಿ ತರಗತಿಗೇ 45 ಸಾವಿರ ರೂಪಾಯಿ ಶುಲ್ಕ ಪಡೆಯುವ ಈ ಶಾಲೆ, ತನ್ನ ಮಾನ್ಯತೆಯ ಬಗ್ಗೆ ಸರ್ಕಾರಕ್ಕೆ ಮತ್ತು ಪೋಷಕರಿಗೆ ಸುಳ್ಳು ಹೇಳಿ ವಂಚಿಸಿದೆ. ನಂಬಿಕೆ ದ್ರೋಹದ ತಳಪಾಯದಲ್ಲಿ ನಡೆಯುವ ಇಂತಹ ಶಾಲೆಗಳಲ್ಲಿ, ಶಿಕ್ಷಕರು ಮಕ್ಕಳಿಗೆ ಯಾವ ಮೌಲ್ಯಗಳನ್ನು ಹೇಳಿಕೊಡಬಹುದು?

ಇದು ಒಂದು ಶಾಲೆಯ ಕಥೆ ಮಾತ್ರವಲ್ಲ. ಸರಿಯಾಗಿ ತನಿಖೆ ಮಾಡಿದರೆ ಬೆಂಗಳೂರಿನಲ್ಲಿ ಮತ್ತು ರಾಜ್ಯದ ಇತರ ನಗರಗಳಲ್ಲಿ ಇಂತಹ ನೂರಾರು ಖಾಸಗಿ ಶಾಲೆಗಳು ಪತ್ತೆಯಾಗುವುದು ಖಂಡಿತ! ಹಾಗೆಯೇ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಇದು ಗೊತ್ತಿಲ್ಲದೇ ನಡೆಯುವಂಥದ್ದೂ ಅಲ್ಲ. ಈ ಶಾಲೆಯವರು ಸರ್ಕಾರಕ್ಕೆ ಮೋಸ ಮಾಡಿದ್ದಾರೆ ಎಂದು ಈಗ ಪೊಲೀಸರಿಗೆ ದೂರು ನೀಡಿರುವ ಶಿಕ್ಷಣ ಇಲಾಖೆಯ ಅಧಿಕಾರಿಗಳೇ, ಹಿಂದೆ ಶಾಲೆಯಲ್ಲಿ ಶುಲ್ಕ ಏರಿಕೆಯ ವಿವಾದ ಉಂಟಾದಾಗ ಶಾಲಾ ಆಡಳಿತ ಮಂಡಳಿ ಮತ್ತು ಪೋಷಕರ ಸಭೆ ಕರೆದು ರಾಜಿ ಮಾಡಿಸಿದ್ದಾರೆ. ಆರ್‌ಟಿಇ ಕಾಯ್ದೆ ಪ್ರಕಾರ 23 ಬಡ ಮಕ್ಕಳಿಗೆ ಈ ಶಾಲೆಯಲ್ಲಿ ಸೀಟು ಕೊಟ್ಟಿದ್ದು, ಅವರ ಶುಲ್ಕವನ್ನು ಸರ್ಕಾರವೇ ಭರಿಸುತ್ತಿದೆ. ಇಷ್ಟೆಲ್ಲ ಇರುವಾಗ ಈ ಶಾಲೆಗೆ ಅನುಮತಿಯೇ ಇಲ್ಲ ಎನ್ನುವುದು ಅಧಿಕಾರಿಗಳಿಗೆ ಗೊತ್ತಿಲ್ಲದೆ ಇರಲು ಸಾಧ್ಯವೆ? ಖಾಸಗಿ ಆಂಗ್ಲ ಶಾಲೆಗಳನ್ನು ವ್ಯಾಪಾರದ ಮಳಿಗೆಗಳಂತೆ ನಡೆಸಿ, ಲಕ್ಷಗಟ್ಟಳೆ ಹಣ ದೋಚುವ ಶಿಕ್ಷಣದ ವ್ಯಾಪಾರಿಗಳಿಗೆ ರಾಜಕೀಯದವರ ಕೃಪಾಶೀರ್ವಾದ ಇಲ್ಲದೆ ಇಂತಹ ಅಕ್ರಮಗಳು ರಾಜಾರೋಷವಾಗಿ ನಡೆಯಲು ಸಾಧ್ಯವೇ ಇಲ್ಲ. ಹಿಂದೆ ಬಸವರಾಜ ಹೊರಟ್ಟಿಯವರು ಶಿಕ್ಷಣ ಸಚಿವರಾಗಿದ್ದಾಗ, ಈ ರೀತಿ ಸರ್ಕಾರದ ಕಣ್ಣಿಗೆ ಮಣ್ಣೆರಚುವ ಶಾಲೆಗಳನ್ನು ಪತ್ತೆಹಚ್ಚಲು ಅಧಿಕಾರಿಗಳಿಗೆ ನಿರಂತರ ಸೂಚನೆ ನೀಡಿದ್ದುಂಟು. ಆ ನಂತರ ಸರ್ಕಾರ ಕಣ್ಣುಮುಚ್ಚಿ ಕುಳಿತಂತಿದೆ. ಈ ಘಟನೆಯ ಬಳಿಕ ಇಂತಹ ಅಕ್ರಮ ಶಾಲೆಗಳ ಪತ್ತೆಗೆ ಸಮಿತಿಯೊಂದನ್ನು ಶಿಕ್ಷಣ ಇಲಾಖೆ ನೇಮಿಸಿದೆ. ಆದರೆ ಆ ಸಮಿತಿ ಎಷ್ಟು ಮುಕ್ತ ಹಾಗೂ ನ್ಯಾಯಬದ್ಧವಾಗಿ ಕೆಲಸ ಮಾಡಬಹುದು? ಒಂದು ವೇಳೆ ಇಂತಹ ಇನ್ನಷ್ಟು ಅಕ್ರಮಗಳನ್ನು ಪತ್ತೆ ಹಚ್ಚಿದರೂ, ಆ ಶಾಲೆಗಳ ಮಾನ್ಯತೆಯನ್ನು ರದ್ದು ಮಾಡಿದರೆ, ಪೋಷಕರು ತಮ್ಮ ಮಕ್ಕಳನ್ನು ಎಲ್ಲಿಗೆ ಕರೆದೊಯ್ಯಬೇಕು ಎನ್ನುವ ಪ್ರಶ್ನೆಗೆ ಸರ್ಕಾರದ ಬಳಿ ಉತ್ತರವಿದೆಯೆ? ಸರ್ಕಾರಕ್ಕೆ ಶಾಲೆಗಳನ್ನು ಸಮರ್ಥವಾಗಿ ನಡೆಸಲು ತಾಖತ್ತಿಲ್ಲ ಎಂದೇ ಖಾಸಗಿಯವರಿಗೆ ಈ ಕ್ಷೇತ್ರದಲ್ಲಿ ದಿಡ್ಡಿಬಾಗಿಲು ತೆರೆಯಲಾಗಿದೆ. ಆದರೆ ಖಾಸಗಿ ಶಾಲೆಗಳ 'ಅಂಧಾ ದರ್ಬಾರ್' ಮೇಲೆ ಸರ್ಕಾರಕ್ಕೆ ಒಂದಿಷ್ಟು ನಿಯಂತ್ರಣವೂ ಇಲ್ಲವೆಂದಾದರೆ ಸರ್ಕಾರಗಳು ಇರುವುದಾದರೂ ಏತಕ್ಕೆ?

■ ಬಿ.ಎಂ.ಹನೀಫ್

